**M.A No.1/2018 PW.1**

ದಿನಾಂಕಃ-27-01-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ಶ್ರೀ.ಸಿ ಪಿ ಬಿ ವಕೀಲರಿಂದ ಎದುರುದಾರ-3 ಮತ್ತು 7 ರವರ ಪರವಾಗಿ</u>

- ನಾನು ಅನಕ್ಷರಸ್ಥ 8 ಗುಂಟಾ ವಿಚಾರವಾಗಿ ನಾನು ಈ ಅರ್ಜಿಯನ್ನು ದಾಖಲಿಸಿದ್ದೇನೆ. ಸದರಿ ಅರ್ಜಿ ಬರೆಸಲು ಮಾಹಿತಿಯನ್ನು ಹೆಬ್ಬಾರ ವಕೀಲರು ಕೊಟ್ಟಿದ್ದರು. ವಕೀಲರ ಕೋರಿಯಕೆಯ ಮೇರೆಗೆ ಹೆಬ್ಬೆಟ್ಟು ರುಜು ಮಾಡಿದ್ದೇನೆ.

2. 2007 ರಲ್ಲಿ ಎದುರುದಾರರು ಸ್ವತ್ತಿನಲ್ಲಿ 8 ಗುಂಟಾ ಅತಿಕ್ರಮಣ ಮಾಡಿದ್ದೇನೆ ಎಂದು ಅವರು ದಾವಾ ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರನ್ನು ನೇಮಿಸಿದ್ದೆ ಎಂದರೆ ಸರಿ. 2007 ರಿಂದಲೂ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹೋಗಿ-ಬರುವುದು ಮಾಡುತ್ತಿದ್ದೇನೆ ಎಂದರೆ ಸಾಕ್ಷಿಯು ಕೆಲಸಕ್ಕೂ ಹೋಗುತ್ತಿದ್ದೆ ಎಂದು ಹೇಳುತ್ತಾರೆ. 2007 ರಿಂದ ಚಿನಗುಂಡಿ ಗ್ರಾಮದಲ್ಲಿ ವಾಸವಾಗಿದ್ದೇನೆ. 2007 ರಿಂದಲೂ ಯಾವ ಯಾವ ಸುನಾವಣೆ ಇರುತಿತ್ತು ಆ ದಿನಾಂಕದಂದು ಬಂದು ವಕೀಲರ ಭೇಟಿ ಮಾಡುತ್ತಿದ್ದೆ ಎಂದರೆ ಸರಿ. ಈಗ ಒಂದು ವರ್ಷದ ಹಿಂದೆ ನಾನು ಕಬ್ಬು ಕಡಿಯುವ ಸಲುವಾಗಿ ಹೋಗಿದ್ದೆ. ಯಾವ ತಿಂಗಳು, ಯಾವ ದಿನಾಂಕದಿಂದ, ಯಾವ ದಿನಾಂಕದವರೆಗೆ ಕಬ್ಬು ಕಡಿಯಲು ಹೋಗಿದ್ದೇನೆ ಎಂದು ನನಗೆ ಹೇಳಲು ಬರುವುದಿಲ್ಲ. ಆ ಅವಧಿಯಲ್ಲಿ ನಾನು ವಕೀಲರಿಗೆ ಭೇಟಿಯಾಗಲು ಅಗಿರಲಲ. ನಾನು ಹಿಂದಿನ ದಿನಾಂಕದಂದು ಸಾಕ್ಷಿಯು ನುಡಿದಾಗ ದಾಖಲೆಗಳನ್ನು ಹಾಜರಪಡಿಸಿದ್ದೆ, ಯಾವ ಯಾವ ದಾಖಲೆಗಳು ಅಂತಾ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ಯಾವ ಉದ್ದೇಶಕ್ಕಾಗಿ ಹಾಜರಪಡಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ಅರ್ಜಿ ದಾಖಲಿಸಲು ಎಷ್ಟು ವಿಳಂಬ ಆಗಿದೆ ಎಂದು ನನಗೆ ಗೊತ್ತಾಗುದಿಲ್ಲ. ಅರ್ಜಿ ಸಲ್ಲಿಸಲು ಎಷ್ಟು ವಿಳಂಬ ಆಗಿದೆ ನನಗೆ ಗೊತ್ತಿಲ್ಲ.

3.ಅರ್ಜಿಯಲ್ಲಿ ಯಾವ ಕಾರಣದಿಂದ ವಿಳಂಬ ಆಗಿದೆ ಎಂದು ಸಮಜಾಯಿಷಿಯನ್ನು ಬರೆಸಿದ್ದೇನೆ. ಈಗ ಒಂದು ವರ್ಷದ ಹಿಂದೆ ನನಗೆ ಆರಾಮ ತಪ್ಪಿದ್ದು ಆ ಕಾರಣದಿಂದ ವಕೀಲರನ್ನು ಭೇಟಿಯಾಗಲು ಆಗಿರಲಿಲ್ಲ. ಅದನ್ನು ಹೊರತುಪಡಿಸಿ ಬೇರೆ ಯಾವ ಕಾರಣಗಳನ್ನು ನನ್ನ ಅರ್ಜಿಯಲ್ಲಿ ಬರೆಸಿಲ್ಲ. ದಿವಾಣಿ ನ್ಯಾಯಾಲಯದಲ್ಲಿ 8 ಗುಂಟಾ ಅತಿಕ್ರಮಣ ಮಾಡಿದ ಬಗ್ಗೆ ಆಜ್ಞಾಪಿ ಆಗಿದೆ ಎಂದರೆ ಸರಿ ಎಂದು ಒಪ್ಪಿ ಅದು ಹೇಗೆ ಆಗಿದೆ ಎಂದು ಹೇಳುತ್ತಾರೆ. ಅರ್ಜಿ ದಾಖಲಿಸಿಲು ಯಾವುದೇ ಕಾರಣಗಳು ಇಲ್ಲದಿದ್ದರು ವಿನಾಕಾರಣ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಬ್ಬೆಟ್ಟಿನವನ ಇದ್ದ ಕಾರಣ ಯಾವ ತಿಂಗಳು, ಯಾವ ಇಸ್ವಿಯಲ್ಲಿ ಆರಾಮ ತಪ್ಪಿತ್ತು ಅಂತಾ ನನಗೆ ಗೊತ್ತಿಲ್ಲ.

4. ನಾನು ಕಬ್ಬು ಕಡಿಯಲು ಹೋದಾಗ ಬಿದ್ದು ಪೆಟ್ಟಾಗಿತ್ತು. ನಾನು ನಮ್ಮ ಊರಿನಲ್ಲಿ ಮಸಾಜ್ ಮಾಡಿಸಿಕೊಳ್ಳುತ್ತಿದ್ದೆ. ಮಾಳು ಹಂಗರಗಿ ಎನ್ನುವವರು ನನಗೆ ಮಸಾಜ್ ಮಾಡಿದರು. ಸದರಿಯವರ ಸಾಕ್ಷಿ ಮಾಡಿಸಲು ನನಗೆ ತೊಂದರೆ ಇಲ್ಲ. ಸದರಿ ವೈದ್ಯರವರು ನಾಟೀ ವೈದ್ಯರು. ನಾಟೀ ವೈದ್ಯರು ಚೀಟಿ ಕೊಟ್ಟಿದ್ದಾಗಲೀ, ಚೀಟಿಯನ್ನು ನಾನು ಹಾಜರಪಡಿಸಿದ್ದಾಗಲೀ ಇಲ್ಲ. ನಾನು ಗಾಡಿಯಿಂದ ಕಬ್ಬು ಕಡಿಯಲು ಹೋದಾಗ ಬಿದಿದ್ದಾಗಲೀ, ಬೆನ್ನು ನೋವಾಗಲೀ, ಮಾಳುವಿನಿಂದ ತಿಕ್ಕಿಸಿಕೊಂಡಿದ್ದಾಗಲೀ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಕಾರಣವನ್ನು ನಮೂದಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ